## ‘ಸತ್ಯ’ ಅನಿರೀಕ್ಷಿತ ಮುಕ್ತಾಯ

ಝೀ ಕನ್ನಡದ ‘ಸತ್ಯ’ ಅನಿರೀಕ್ಷಿತವಾಗಿ ಅಂತ್ಯ ಕಂಡಿತು. ವರ್ಷಾನುಗಟ್ಟಲೆ ಹರಿದುಬಂದ ಕಥೆ, ಒಂದು ಹಂತದಲ್ಲಿ ಹೇಗೆ ಮುಂದುವರಿಸಬೇಕು ಎಂದು ನಿರ್ದೇಶಕರಿಗೆ ತಲೆನೋವು ಆಯಿತೇನೊ? ಕಥೆಯ ಜಾಡು ಹಳ್ಳ ಹಿಡಿಯುತ್ತಿತ್ತು. ಕೊನೆಗೂ ದಿವ್ಯಾ–ಬಾಲ ಸಂಸಾರ ಸರಿಹೋಗಲಿಲ್ಲ. ಲಕ್ಷ್ಮಣ ಕಾಡಿನಿಂದ ಮರಳಿ ಬರಲಿಲ್ಲ. ಚಿಕ್ಕದಾಗಿ ಚೊಕ್ಕವಾಗಿ ಸಮರ್ಪಕವಾಗಿ ಮುಗಿಸುವ, ಸಮಾಜಕ್ಕೆ ಏನಾದರೂ ಸಂದೇಶ ನೀಡುವ ಧಾರಾವಾಹಿಗಳನ್ನು ಬಿತ್ತರಿಸಿ.

—ಅರುಣ್ ಕೆ.ಎನ್.

## ಕಿರುತೆರೆಗೂ ಸೆನ್ಸಾರ್ ಬೇಕಿದೆ

ಮೇರೆ ಮೀರಿದ ಕ್ರೌರ್ಯದಿಂದ ಸಮಾಜದ ಸ್ವಾಸ್ಥ್ಯ ಕೆಡುತ್ತಿರುವ ಈ ದಿನಗಳಲ್ಲಿ ಉತ್ತಮ ಸಂದೇಶ ಸಾರುವ ಧಾರಾವಾಹಿಗಳ ಅಗತ್ಯವಿದೆ. ಇಂದಿನ ಹೆಚ್ಚಿನ ಧಾರಾವಾಹಿಗಳು ಖಳನಾಯಕಿಯರ ಮಿತಿಮೀರಿದ ಕ್ರೌರ್ಯದಿಂದ ತುಂಬಿವೆ. ಅವರ ಕುತಂತ್ರಗಳು ಭಯಹುಟ್ಟಿಸುವಂತಿವೆ. ನಮ್ಮ ಇಂದಿನ ವಿದ್ಯಾರ್ಥಿಗಳು ಮಾಡದಿರುವ ಚೇಷ್ಟೆಗಳೇ ಇಲ್ಲ. ಕಲರ್ಸ್ ಕನ್ನಡದ ‘ಕರಿಮಣಿ’ ಹೊಸ ಕುಚೇಷ್ಟೆಗಳನ್ನು ಕಲಿಸುತ್ತಿದೆ. ರಿಯಾಲಿಟಿ ಶೋಗಳನ್ನು ವೀಕ್ಷಿಸಲು ಅಸಹ್ಯವಾಗುತ್ತದೆ. ಈ ಹುಚ್ಚಾಟ ನೋಡಿದರೆ ಸಿನಿಮಾಗಳಿಗೆ ಇರುವಂತೆ ಸೆನ್ಸಾರ್ ಬೋರ್ಡ್ ಟೀವಿಗಳಿಗೂ ಅಗತ್ಯವಿದೆ ಎನ್ನಿಸುತ್ತದೆ.

—ಮುಕ್ತ ಸಿ.ಎನ್.

## ಸಮಾಧಾನವಾಯ್ತು...

ಕನ್ನಡ ಧಾರಾವಾಹಿಗಳಲ್ಲಿ ಹೇಳಿದ್ದನ್ನೇ ಹೇಳುವುದು, ನೈಜತೆಗೆ ದೂರವಾದ ಸನ್ನಿವೇಶವನ್ನೇ ಎಳೆಯುವುದು, ಲೇಡಿ ವಿಲನ್‌ಗಳ ಅಟ್ಟಹಾಸ, ಕಣ್ಣೀರು, ಜೈಲು, ಕಿಡ್ನಾಪ್, ಹೊಡೆದಾಟ – ಇವೆಲ್ಲವೂ ಸರ್ವೇಸಾಮಾನ್ಯ. ಝೀ ಕನ್ನಡದ ‘ಲಕ್ಷ್ಮೀನಿವಾಸ’ದಲ್ಲಿ ಕಿಡ್ನಾಪ್ ದೃಶ್ಯ ಬರದೇ ನಮಗೆ ಅತೀವ ಬೇಸರವಾಗಿತ್ತು. ಕಳೆದ ವಾರ ನಾಯಕಿಯ ಅಪಹರಣ, ಹೊಡೆದಾಟ, ಬಡಿದಾಟ ಎಲ್ಲವೂ ಸುಲಲಿತವಾಗಿ ನಡೆದು ನಮಗೆ ಮೃಷ್ಟಾನ್ನ ಭೋಜನ ಮಾಡಿ ತೇಗಿದಂತಾಯಿತು.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಪದಬಳಕೆಯಲ್ಲಿ ಎಚ್ಚರ ಇರಲಿ

ಹೊಸ ಪದಗಳ ಬಳಕೆ ಒಳ್ಳೆಯ ಬೆಳವಣಿಗೆ. ಆದರೆ ಅವುಗಳ ಅರ್ಥವನ್ನು ಸರಿಯಾಗಿ ತಿಳಿದಿರಬೇಕು. ಪದಗಳ ತಪ್ಪು ಪ್ರಯೋಗ ನಗೆಪಾಟಲಾಗಬಾರದು. ಕಲರ್ಸ್ ಕನ್ನಡದ ‘ರಾಮಾಚಾರಿ’ಯ ಮರುಮದುವೆ. ಮಾನ್ಯತಾಳ ಗೆಳತಿ ಮಗ ದಿಗಂತ್ ಜೊತೆ ಮಾತನಾಡುತ್ತಾ ‘ದಿಗಂತ’ ಅಂದರೆ ‘ದಿಕ್ಕು’ ಎಂದರ್ಥ. ನೀನು ಚಾರುವನ್ನು ಮದುವೆಯಾಗಿ ಅವಳಿಗೊಂದು ದಿಕ್ಕು ತೋರಿಸು ಎಂದು ಹೇಳುತ್ತಾಳೆ. ಈ ಸಂಭಾಷಣೆ ಕಿವಿಗೆ ಬಿದ್ದ ತಕ್ಷಣ ನನ್ನ ಕನ್ನಡಪ್ರೇಮ ಜಾಗೃತವಾಗಿ ಗೂಗಲ್ ತಡಕಾಡಿತು. ನಾನು ಅಂದುಕೊಂಡಿದ್ದ ಅರ್ಥಗಳೇ ಅಂತರಿಕ್ಷ, ಗಗನ, ಅಂಬರ, ಆಕಾಶ, ಬಾನು, ಮುಗಿಲು ಕಾಣಿಸಿತು. ಎಲ್ಲಿಯೂ ದಿಕ್ಕು ಎಂಬ ಅರ್ಥ ಕಾಣಲಿಲ್ಲ. ಗೊತ್ತಿಲ್ಲದ ಪದಗಳನ್ನು ಬಳಸುವ ಮುನ್ನ ಎಚ್ಚರಿಕೆಯಿಂದ ಸಂಭಾಷಣೆಯನ್ನು ಬರೆಯಬೇಕು.

—ಶ್ರುತಿ ಎಸ್.

## ವಾರದ ಪತ್ರ

### ಧಾರಾವಾಹಿಗಳನ್ನು ಅನುಕರಿಸಿದರೆ ಗತಿಯೇನು?

ಸ್ವಂತ ಅಳಿಯನನ್ನೇ ಕೊಂದು ಮಗಳು ತನ್ನ ಮನೆಗೆ ಬರುವಂತೆ ಮಾಡಿ, ಅವಳಿಗೆ ತನ್ನ ಘನತೆಗೆ ತಕ್ಕಂತೆ ಇನ್ನೊಂದು ಮದುವೆ ಮಾಡಬಯಸುವ ತಾಯಿ. ತಾನು ಮದುವೆಯಾಗಿ ಬಂದ ಕುಟುಂಬವನ್ನೇ ಸರ್ವನಾಶ ಮಾಡಬೇಕೆಂದು ಬಯಸುವ ಸೊಸೆ. ಇದು ಕಲರ್ಸ್ ಕನ್ನಡ ‘ರಾಮಾಚಾರಿ’ಯ ಕಥೆ.

ತಮ್ಮನ ಬಾಳನ್ನು ಹಾಳು ಮಾಡಿ ತಂದೆಯ ಹೆಸರಿನಲ್ಲಿರುವ ಆಸ್ತಿಯನ್ನೆಲ್ಲ ತನ್ನದಾಗಿಸಿಕೊಳ್ಳಬೇಕೆಂದು ಬಯಸುವ ಅಕ್ಕ, ಅವಳಿಗೆ ಸಾಥ್ ನೀಡುವ ಆರಾಧನಾಳ ಮಲತಂದೆ – ಇದು ‘ಅಂತರಪಟ’.

ಬಾವನ ಮಗಳು ಸಾಹಿತ್ಯಳನ್ನು ಹೇಗಾದರೂ ಮಾಡಿ ಮನೆಯಿಂದ ಹೊರದೂಡಬೇಕೆನ್ನುವ ಚಿಕ್ಕಮ್ಮ; ಅವಳಿಗೆ ಸಾಥ್ ನೀಡುವ ಕರ್ಣನ ಸೋದರತ್ತೆ – ಇದು ‘ಕರಿಮಣಿ’. ಈ ಧಾರಾವಾಹಿಗಳ ನಿರ್ದೇಶಕರು ಸಮಾಜಕ್ಕೆ ಏನನ್ನು ಹೇಳಲು ಬಯಸಿದ್ದಾರೆ?

ಧಾರಾವಾಹಿಗಳಲ್ಲಿ ಸೃಷ್ಟಿಸುವ ಹೆಣ್ಣಿನ ಪಾತ್ರಗಳಲ್ಲಿ ಸೇಡು, ಮತ್ಸರ ಹಾಗೂ ಮನೆಮುರುಕತನದ ಗುಣಗಳೇ ಪ್ರಧಾನವಾಗಿವೆ. ಇವುಗಳನ್ನು ವೀಕ್ಷಿಸುವ ದುರ್ಬಲ ಮನಸ್ಸಿನ ಹೆಣ್ಣುಮಕ್ಕಳು ಈ ಪಾತ್ರಗಳನ್ನು ನಿಜವೆಂದು ನಂಬಿ ಅವರಂತೆಯೇ ವರ್ತಿಸಿದರೆ ನಮ್ಮ ಕುಟುಂಬಗಳ ಗತಿಯೇನು? ಸಮಾಜದ ಗತಿಯೇನು?

—ಮುರಲೀಧರ ಕುಲಕರ್ಣಿ, ಬೀದರ್

## ನಮ್ಮ ನೋವು ಸುದ್ದಿಯೇ ಅಲ್ಲ

ನಮ್ಮ ಸುದ್ದಿ ಮಾಧ್ಯಮಗಳಿಗೆ ಶುಭೋದಯವಾಗುವುದೇ ಕೊಲೆ, ಸುಲಿಗೆ ದರೋಡೆಗಳ ಮೂಲಕ. ಇತ್ತೀಚೆಗಂತೂ ಆರೋಪಿ ಮತ್ತವನ ತಂಡದ ಮೇಲಿನ ಆರೋಪದ ಕುರಿತು ಹೇಳಿದ್ದೇ ಹೇಳುತ್ತಾರೆ. ನಮ್ಮ ಅನೇಕ ಜೈಲುಗಳಲ್ಲಿ ಅಸಂಖ್ಯಾತ ಆರೋಪಿಗಳು ಬಂದೀಖಾನೆಯೊಳಗೆ ಕೊಳೆಯುತ್ತಿರುತ್ತಾರೆ. ಅವರ ಸ್ಥಿತಿ ಏನು ಎಂಬುದು ಯಾರಿಗೂ ಬೇಡ. ನಮ್ಮ ನಿತ್ಯದ ನೋವು–ನಲಿವಿನ ಘಟನೆಗಳಂತೂ ಅವರಿಗೆ ಸುದ್ದಿಯೇ ಅಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಅರ್ಥಪೂರ್ಣ ಸ್ವಾತಂತ್ರ್ಯೋತ್ಸವ

ಚಂದನದ ‘ಥಟ್ ಅಂತ ಹೇಳಿ’ ತಪ್ಪದೇ ವೀಕ್ಷಿಸುತ್ತೇವೆ. ನಮಗೆಲ್ಲ ಈ ಕಾರ್ಯಕ್ರಮ ಅತ್ಯಂತ ಪ್ರಿಯವಾಗಿದೆ. ನಿರೂಪಕರು ಕನ್ನಡ ಶ್ರೀಮಂತಿಕೆಯ ಸ್ಪಷ್ಟ ಉಚ್ಚಾರಣೆಯೊಂದಿಗೆ ನಡೆಸಿಕೊಡುತ್ತಾರೆ. ಇತ್ತೀಚೆಗೆ ವಿದುರಾಶ್ವತ್ಥದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಹೋರಾಟದ ದಿನಗಳನ್ನು ನೆನಪಿಸುವ ಹಾಗೂ ಈ ಹೋರಾಟದಲ್ಲಿ ಹುತಾತ್ಮರಾದ ಹೋರಾಟಗಾರರಿಗೆ ಭಾವಪೂರ್ಣ ಗೌರವ ಸಲ್ಲಿಸಿದರು. ಮಾಹಿತಿಪೂರ್ಣ ಕಾರ್ಯಕ್ರಮ ನೀಡುತ್ತಿರುವ ಚಂದನ ಯುವಜನಾಂಗಕ್ಕೆ ಉಪಯುಕ್ತವಾಗುವ ಬೇರೆ ಬೇರೆ ಕಾರ್ಯಕ್ರಮಗಳನ್ನೂ ನೀಡಬೇಕೆಂದು ಕೋರಿಕೆ.

—ಧನ್ವಂತ್ರಿ ಡಿ., ಬೆಂಗಳೂರು

ವೀರಭೂಮಿ, ವಿದುರಾಶ್ವತ್ಥದಲ್ಲಿ 78ನೇ ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆ ರೂಪಿಸಿದ ಚಂದನಕ್ಕೆ ಅಭಿನಂದನೆಗಳು. ಕಾರ್ಯಕ್ರಮ ರೋಮಾಂಚಕ ಭಾವನೆಯನ್ನು ಮೂಡಿಸಿತು. ಸ್ವಾತಂತ್ರ್ಯ ಜಯಘೋಷ ಹೃನ್ಮನದಲಿ ಅನುರಣಿಸಿತು.

—ಸುಮನಾ

‘ಥಟ್ ಅಂತ ಹೇಳಿ’ ರಸಪ್ರಶ್ನೆಯ ವಿಶೇಷ ಕಾರ್ಯಕ್ರಮವನ್ನು ವಿದುರಾಶ್ವತ್ಥ ಹಾಗೂ ನಂದಿ ಗಿರಿಧಾಮದಲ್ಲಿ ಏರ್ಪಡಿಸಿದ್ದು ಮೆಚ್ಚುಗೆಯಾಯಿತು. ಶಾಲಾಮಕ್ಕಳಿಗೆ ರಸಪ್ರಶ್ನೆ ಏರ್ಪಡಿಸಿ ಸಾಕಷ್ಟು ಮಾಹಿತಿ ಹಂಚಿಕೊಂಡರು. ಹಾಗೆಯೇ ನಂದಿ ಗಿರಿಧಾಮದಲ್ಲೂ ಪ್ರವಾಸಿಗರಿಗೆ ಸರಳ ಪ್ರಶ್ನೆಗಳನ್ನು ಕೇಳಿ ಪುಸ್ತಕ ಬಹುಮಾನ ನೀಡಿದರು. ಮುಂದೆಯೂ ಕರ್ನಾಟಕದ ಐತಿಹಾಸಿಕ, ಪ್ರೇಕ್ಷಣೀಯ ತಾಣಗಳಲ್ಲಿ ಇಂತಹ ಪ್ರಯೋಗಗಳನ್ನು ನಿರೀಕ್ಷಿಸುತ್ತೇವೆ.

—ಬಿ.ಎನ್. ಭರತ್, ಬೆಂಗಳೂರು

ನಾಲ್ಕು ಕಂತುಗಳಲ್ಲಿ ಪ್ರಸಾರವಾದ 78ನೇ ಸ್ವಾತಂತ್ರ್ಯೋತ್ಸವದ ಚಂದನದ ವಿಶೇಷ ‘ಥಟ್ ಅಂತ ಹೇಳಿ’ ಕಾರ್ಯಕ್ರಮ ಅರ್ಥಪೂರ್ಣ ಎನಿಸಿತು. ಗಾಂಧಿ ಭವನ, ನೆಹರೂ ಭವನ, ಟಿಪ್ಪು ಸುಲ್ತಾನ್ ಬೇಸಿಗೆ ಅರಮನೆ ಸ್ಥಳಗಳ ಜೊತೆಗೆ ಭೋಗ ನಂದೀಶ್ವರ, ಯೋಗ ನಂದೀಶ್ವರ ದೇವಸ್ಥಾನ ಹಾಗೂ ಪ್ರಕೃತಿ ಸೊಬಗಿನ ಮಧ್ಯೆ ನಡೆಸಿದ್ದು ಕಾರ್ಯಕ್ರಮಕ್ಕೆ ವಿಶೇಷ ಮೆರುಗನ್ನು ನೀಡಿತು. ಈ ಗಿರಿಧಾಮದಲ್ಲಿ ಮಹಾತ್ಮ ಗಾಂಧೀಜಿಯವರು 45 ದಿನಗಳ ಕಾಲ ವಿಶ್ರಾಂತಿ ಪಡೆದದ್ದೂ ಉಲ್ಲೇಖಾರ್ಹ ಅಂಶ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ